# ಅಕ್ಕಮಹಾದೇವಿಯವರ ತಪೋಭೂಮಿ
# ಏಳು ನದಿಗಳ ಸಂಗಮ ಸ್ಥಳ

ಮೊದಮೊದಲು ಕದಳಿ ಪ್ರದೇಶವನ್ನು ಶೋಧಿಸಿ, ಪರಿಚಯಿಸಿದವರು ಬಳ್ಳಾರಿಯ ಟಿ.ಎಚ್.ಎಂ. ಚಂದ್ರಶೇಖರಯ್ಯ-ಸದಾಶಿವಯ್ಯ ಬಂಧುಗಳು, ಸಿರಿಗಿರಿಯ ಮಹಾಸಂಸ್ಥಾನದ ಹಿಂದಿನ ಜಗದ್ಗುರುಗಳಾದ ಶ್ರೀ ಶಿವಕುಮಾರ ಮಹಾಸ್ವಾಮಿಗಳು ತಮ್ಮ ಕದಳಿ ಸಂದರ್ಶನದ ಬಗ್ಗೆ ಲೇಖನಗಳನ್ನು ಹಾಗೂ ಚಿತ್ರಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಅಕ್ಕಮಹಾದೇವಿಯವರ ಘನವ್ಯಕ್ತಿತ್ವದ ಪ್ರಭಾವಮುದ್ರೆ ಇಂದಿನವರೆಗೂ ಜನತೆಯ ಮನಸ್ಸಿನ ಮೇಲೆ ಶಾಶ್ವತ ಪರಿಣಾಮ ಬೀರಿರುವುದಕ್ಕೆ ಮಹಾದೇವಿಯವರ ವಚನಗಳು ಜೀವಂತ ಸಾಕ್ಷಿಯಾಗಿದೆ.



ತನ್ನ ಆತ್ಮಸಾಕ್ಷಾತ್ಕಾರಕ್ಕಾಗಿ ಹಂಬಲಿಸಿ ಕಷ್ಟ-ನಷ್ಟಗಳನ್ನು ಅನುಭವಿಸುತ್ತ ಅಗಾಧವಾದ ಆತ್ಮಬಲದಿಂದ ಅಲೌಕಿಕ ಸಿದ್ಧಿಯನ್ನು ಮೈಗೂಡಿಸಿಕೊಂಡ ವಿರಳ ವ್ಯಕ್ತಿತ್ವ ಅಕ್ಕನವರುದು.ಇಂಥ ಪವಿತ್ರಚೇತನಕ್ಕೆ ಆಶ್ರಯವನ್ನಿತ್ತು ಪಾವನವಾದ ಸುಕ್ಷೇತ್ರ ಶ್ರೀ ಶೈಲ, ಭಾರತದಲ್ಲಿ ಉದಯವಾದ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ,ದಕ್ಷಿಣಭಾರತದಲ್ಲಿ ಸುಪ್ರಸಿದ್ಧವಾದ ಕ್ಷೇತ್ರವೇ ಶ್ರೀಶೈಲ ಎನ್ನುವುದನ್ನು ಪ್ರಾಚೀನ ಕಾಲದಿಂದಲೂ ಎಲ್ಲರೂ ಒಪ್ಪಿಕೊಂಡಿರುವರು.



ಅಕ್ಕಮಹಾದೇವಿಯವರು ಶ್ರೀಶೈಲವನ್ನು ತಲುಪಿ ಅಲ್ಲಿಂದ ಪಾತಾಳ ಗಂಗೆಯ ಸಮೀಪದಲ್ಲಿ ಪುರಾತನಕಾಲದ ಗುಹೆ ಇದೆ 'ಅಕ್ಕನ ಗವಿ' ಎಂದೇ ಹೆಸರುವಾಸಿಯಾದ ಅಕ್ಕಮಹಾದೇವಿಯವರ ಹೆಸರಿನಲ್ಲಿ ಒಂದು ಅದ್ಭುತವಾದ ಗವಿಯೊಂದಿರುವುದು. ಈ ಗವಿಯಲ್ಲಿ ಹತ್ತು ವರ್ಷಗಳ ಕಾಲ ಅಕ್ಕ ಅನುಷ್ಠಾನಗೈದರು ಪ್ರತೀತಿ ಇದೆ. ಈ ಗವಿಯನ್ನು ಒಳಹೊಕ್ಕರೆ ಅಕ್ಕ ಅನುಷ್ಠಾನದ ಸಮಯದಲ್ಲಿ ಪೂಜಿಸಿದ್ದ 'ಶಿವಲಿಂಗ' ಗೋಚರವಾಗುವುದು ಇದೊಂದು ಅಕ್ಕಮಹಾದೇವಿಯವರ ಅಳಿದುಳಿದ ಸ್ಮಾರಕವಾಗಿ ನಿಂತಿದೆಯೆಂದರೆ ತಪ್ಪಾಗಲಾರದು! ಶ್ರೀಶೈಲದೊಳಗಿನ ಸುತ್ತಲೂ ಪರ್ವತಕ್ಕೆ ಸುಮಾರು 25 ಕಿ.ಮೀ ದೂರದಲ್ಲಿ ವಾಯುವ್ಯ ದಿಕ್ಕಿನಲ್ಲಿ ಈ ಗುಹೆಗಳಿವೆ. ಒಟ್ಟು 6 ಗುಹೆಗಳಿಗೂ ಮಧ್ಯವಿರುವ ಗುಹೆ ಅಕ್ಕಮಹಾದೇವಿಯವರು ನೆಲೆಸಿದ್ದ ಗುಹೆ. ಮೊದಲು ಈ ಗುಹೆಗೆ ಹೋಗಬೇಕಾದರೆ ಪಾತಾಳಗಂಗೆಯ ಸುಮಾರು ಆರುನೂರು ಮೆಟ್ಟಿಲುಗಳನ್ನು ಇಳಿದು ನಂತರ ಬೋಟುಗಳಲ್ಲಿ ಇಲ್ಲವೆ ತೆಪ್ಪಗಳಲ್ಲಿ ಪಯಣಿಸಬೇಕಾಗಿತ್ತು.ಆದರೆ ಇತ್ತೀಚೆಗೆ ಇಂತಹ ಕಠಿಣವಾದ ಪಯಣ ದೂರವಾಗಿದೆ.



ಈ ಸಂಬಂಧವಾಗಿ ಅಕ್ಕಮಹಾದೇವಿಯವರ ಸಮಿತಿ ಪರವಾಗಿ ಹಿಂದಿನ ಆಂಧ್ರ ರಾಜ್ಯದ ಮುಖ್ಯಮಂತ್ರಿಗಳಿಗೆ ನಡೆಸಿದ ಪತ್ರವ್ಯವಹಾರ ಸಂದರ್ಶನ ನೆನಪಿಸಿಕೊಳ್ಳಬೇಕಾಗುತ್ತದೆ. ಆಂಧ್ರಪ್ರದೇಶದ ಪ್ರವಾಸೋದ್ಯಮ ಇಲಾಖೆಯವರು ಪಾತಾಳೇಶ್ವರದಿಂದ ಪಾತಾಳಗಂಗೆಯವರೆಗೆ 'ರೋಪ್‌ವೇ' ಯನ್ನು ನಿರ್ಮಾಣಮಾಡಿ ಪಯಣಿಕರಿಗೆ ಸುಲಭವಾಗಿ ಪಾತಾಳಗಂಗೆಯನ್ನು ತಲುಪಿ ಅಲ್ಲಿಂದ ಯಂತ್ರಚಾಲಿತ ದೋಣಿಗಳ ಮುಖಾಂತರ ಅಕ್ಕನ ಗವಿಯನ್ನು ಸುಲಭವಾಗಿ ತಲುಪಿಸಲು ಅವಕಾಶವಿದೆ. ಪಾತಾಳಗಂಗೆಯಿಂದ ಸುಮಾರು ಏರಡು ಗಂಟೆಯ ಯಂತ್ರಚಾಲಿತ ದೋಣಿಯಲ್ಲಿ ಗುಹೆಗೆ ಪಯಣ 25ಕಿ.ಮೀ

[ಕೃಷ್ಣಾ, ತುಂಗಾ, ಭದ್ರಾ, ಗೋದಾವರಿ, ಘಟಪ್ರಭಾ, ಮಲಪ್ರಭಾ, ಕೊಟ್ನಾ ಒಟ್ಟು ಏಳು ನದಿಗಳ ಸಂಗಮವಿಲ್ಲಿದೆ] ವಿಶಾಲವಾದ ನದಿಯ ಮಧ್ಯದಲ್ಲಿ ಪಯಣಿಸುತ್ತಿದ್ದರೆ, ಎರಡೂಕಡೆ, ಬೆಟ್ಟದ ಸಾಲು ದೇವಶಿಲ್ಪಿ ನಿರ್ಮಾಣಮಾಡಿದ ಕಲ್ಲಿನ ಗೋಡೆಯಂತೆ ಬೆಟ್ಟದಲ್ಲಿ ಮೇಲೆ ಎದ್ದು ಕಾಣುವ ಚಿತ್ರಗಳು ಪ್ರಕೃತಿಯ ಅದ್ಭುತ ಕೊಡುಗೆಗಳಾಗಿವೆ. ಪ್ರಯಾಣಿಕರು ಪ್ರಕೃತಿ ಸೌಂದರ್ಯವನ್ನು ಸವಿಯುತ್ತ ಸುಮಾರು 25ಕಿ.ಮೀ ದೂರ ಕ್ರಮಿಸಿ ನಿರ್ಜನ ಪ್ರದೇಶ, ಅಲ್ಲಿಂದ ಕೆಲವೇ ಹೆಜ್ಜೆಗಳನ್ನು ಹಾಕಿ ಮುನ್ನಡೆದರೆ ಸಿಗುವುದೇ ವಿಶ್ವಗುರು ಅಕ್ಕಮಹಾದೇವಿಯವರ ಗವಿ-ಗುಹೆ. ಅಕ್ಕ ವಾಸಿಸಿದ್ದ ಹಾಗೂ ತನ್ನ ಪತಿಯನ್ನು ಆರಾಧಿಸಿದ ಸ್ಥಳ.

ದೂರದಿಂದಲೇ ಪ್ರಕೃತಿಯಿಂದಲೇ ಕೊರೆದು ರಚಿತವಾದ ಮಂಟಪದಂತೆ ಕಾಣುವ ಈ ಗುಹೆ ಹತ್ತಿರ ನೋಡುವಾಗ ಪ್ರಕೃತಿಯ ಶಿಲ್ಪಕಲೆಯನ್ನು ಕಾಣುವುದೇ ಒಂದು ವಿಸ್ಮಯಕಾರಿ. ನಿಸರ್ಗ ನಿರ್ಮಾಣದ ಸುಂದರ ಶಿಲ್ಪಕಲೆಯ ಹೆಬ್ಬಾಗಿಲಿನಂತೆ ಸಾಕಾರವಾಗಿದೆ. ಇದು ಬೆಟ್ಟದಿಂದಲೇ ನಿರ್ಮಾಣವಾದ ಮಂಟಪವಿದು. ಗುಹೆಯ ಪಕ್ಕಕ್ಕೆ ಪುರಾತನ ಶಿವಲಿಂಗ, ಬಸವ ಇದೆ. ಅದರ ಹಿಂಬದಿಯಲ್ಲಿ ಗುಹೆಯಿದೆ. ಈ ಗುಹೆಯ ಒಳಗುಟ್ಟು ಯಾರೂ ತಿಳಿದವರಿಲ್ಲ. ಹೆಬ್ಬಾಗಿಲಿನಿಂದ ಆ ಭವ್ಯವಾದ

ಕಡಿದಾದ ಗವಿಯೊಳಗೆ ಕತ್ತಲು ತುಂಬಿದೆ. ದೀಪದ ಸಹಾಯದಿಂದ ಒಳಹೋಗಬೇಕು, ಗವಿಯೊಳಗೆ ಹೋಗುತ್ತಾ ಹಾದಿ ಕಿರಿದಾಗುತ್ತದೆ. ಅಲ್ಲಿಂದ ಮುಂದಕ್ಕೆ ಒಬ್ಬರೇ ಹೋಗಬೇಕು. ಗವಿಯ ಗೋಡೆಗಳ ಮೇಲೆ ಶಿಲ್ಪಿಯೊಬ್ಬ ಕೆತ್ತಿದಂತೆ, ಸಾಲು ಸಾಲು ಸೂಕ್ತ ಕೆತ್ತನೆಗಳನ್ನು ದೀಪದ ಬೆಳಕಿನಲ್ಲಿ ನೋಡುತ್ತ ಕಿರಿದಾದ, ಕಡಿದಾದ ಗವಿಯಲ್ಲಿ ಬಗ್ಗಿ ನಡೆದರೆ, ಅಲ್ಲಿ ಅಕ್ಕ ಅನುಸಂಧಾನ ಮಾಡಿದ ಹಾಗೂ ಪೂಜಿಸುತ್ತಿದ್ದ ಶಿವಲಿಂಗದ ದರ್ಶನವಾಗುತ್ತದೆ. ಅಲ್ಲಿ ಹೆಚ್ಚು ಹೊತ್ತು ನಿಲ್ಲಲು ಸಾಧ್ಯವಿಲ್ಲ. ಆದರೂ, ಅಲ್ಲಿಯ ಶಿವಲಿಂಗ ದರ್ಶನದ ಅನುಭವವನ್ನೂ ಅಲ್ಲಿಯೇ ಸವಿಯಬೇಕು. ಅಕ್ಕಮಹಾದೇವಿಯವರ ಗುಹೆಯಲ್ಲಿ ಹೆಚ್ಚಿನ ಸಾಧುಗಳು ಸಿದ್ದರು ತಪಸ್ಸು ಮಾಡುತ್ತಿದ್ದರೆಂದು ಹೇಳಲಾಗಿದೆ. ಇದೊಂದು ದೈವೀಕೃಪೆಯ ಜಾಗೃತ ಸ್ಥಳ. 'ಶರಣರು ಮೆಟ್ಟಿದ ಧರೆ ಪಾವನ' ಯೆಂಬಂತೆ ಅಕ್ಕ ವಾಸಿಸಿದ ಸ್ಥಳ, ಮೆಟ್ಟಿದ ಸ್ಥಳ, ಅಕ್ಕಮಹಾದೇವಿಯವರ ಅಧ್ಯಾತ್ಮ ಅಪರೂಪದ ಶಕ್ತಿ ಇಂದಿಗೂ ಬತ್ತದೆ ಇಲ್ಲಿಯೇ ಇದೆಯೆಂಬ ಭಾವನೆ ಉಂಟಾಗುತ್ತದೆ. ಅಕ್ಕನ ಗವಿಯ ಒಳಭಾಗದಲ್ಲಿಯ ಶಿವಲಿಂಗ ದರ್ಶನ ಮಾಡುವುದು ಒಂದು ಅಪರೂಪದ ಪ್ರತಿಯೊಬ್ಬ ಭಕ್ತರ ಮನೋಭಿಲಾಶೆಯಾಗಿದೆ.

ಅಲ್ಲಿಂದ ಮುಂದೆಯೇ ಅಕ್ಕಮಹಾದೇವಿಯ ಗುಹೆಯಿಂದ ಕೃಷ್ಣಾನದಿಯ ಆಚೆ ದಡಕ್ಕೆ ಹೋಗಿ ಸುಮಾರು 10 ಕಿ.ಮೀ. ಬೆಟ್ಟ ಗುಡ್ಡಗಳನ್ನೂ ಹತ್ತಿ ಇಳಿದು ಕದಳಿ ಬನವನ್ನು ಸೇರಬಹುದು.ಕದಳಿವನ ಶ್ರೀಶೈಲ ದೇವಾಲಯದಿಂದ 35 ಕಿ.ಮೀ.ದೂರವಿದೆ. ಅಕ್ಕಮಹಾದೇವಿಯವರು ಕಲ್ಯಾಣದಲ್ಲಿ ಅಲ್ಲಮಪ್ರಭುವಿಗೆ ತನ್ನ ಲಿಂಗೈಕ್ಯದ ಸ್ಥಳ ಯಾವುದೆಂದು ಕೇಳಿದಾಗ ಹೇಳಿದ ವಚನ ಇಲ್ಲಿ ಸ್ಮರಣಾರ್ಹ :

'ನೀನು ನಾನೆಂಬ ಉಭಯವನಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ತುದಿಯ ಮೆಟ್ಟಿ ನೋಡಲು ಬಟ್ಟಬಯಲು ಕಾಣಬಹುದು ನೋಡಾ! ಆ ಬಯಲ ಬೆರಸುವರೆ ಶ್ರೀ ಗಿರಿಯ ಮೇಲೊಂದು ಕಾಣಬಾರದ ಕದಳಿಯುಂಟು ನೋಡಾ ಕದಳಿಯ ಕಳೆದು ಅಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ। ನಡೆಯಲ್ಲಿಗೆ ತಾಯೆ, ಗುಹೇಶ್ವರ ಲಿಂಗದಲ್ಲಿ ಪರಮ ಪದವು-ನಿನಗೆ ಸ್ವಯವಹುದು ನೋಡಾ।'


ಅಕ್ಕಮಹಾದೇವಿಯವರು ಈ ಗುಹೆಯನ್ನು ಆಂಧ್ರ ಸರ್ಕಾರ ಕದಳಿ ಬೆಟ್ಟವನ್ನು ತಾನು ಅಭಿವೃದ್ಧಿಗೊಳಿಸಿರುವ 'ಬೇಲಂಗವಿ' ಮಾದರಿಯಲ್ಲಿ ಅಭಿವೃದ್ಧಿಗೊಳಿಸಿ ಪ್ರವಾಸೀ ತಾಣವಾಗಿ ಮಾಡುವಂತೆ ಮನವಿ ಮಾಡಲಾಗಿದೆ. ಅದು ಈಡೇರುವ ಆಸೆ (ಡಾ.ಲೀಲಾದೇವಿ ಆರ್. ಪ್ರಸಾದ್ ಅವರ ಮನವಿ ಇದು) ಭಾಗೋಳಿಕವಾಗಿ ಕದಳಿ ಪರ್ವತ ಪ್ರದೇಶವಾಗಿ ಗುರುತಿಸಲ್ಪಟ್ಟಿದ್ದು ಶ್ರೀ ಶೈಲದಿಂದ ಕೃಷ್ಣಾನದಿಯಲ್ಲಿ ಬೋಟಿನ ಮುಖಾಂತರ ತಲುಪಿ ಕಾಡಿನ ಪ್ರದೇಶ ಹತ್ತಿ ಹಾದು ಅಕ್ಕಮಹಾದೇವಿಯವರು ಐಕ್ಯರಾದ ಗುಹೆಯನ್ನು ಕಾಣಬಹುದಾಗಿದೆ. ಮೊದಮೊದಲು ಈ ಪ್ರದೇಶ ಬಾಳೆಯವನವೆಂದು ನಂಬಲಾಗಿದ್ದು ಈಗ ಅಲ್ಲಿ ಬಾಳೆಯವನ ಕಾಣಬರುತ್ತಿಲ್ಲ. ಶ್ರೀ ಶೈಲ ಕ್ಷೇತ್ರದ ಸುತ್ತಮುತ್ತಲಿನ ಪರಿಸರದಲ್ಲಿ ಅಕ್ಕಮಹಾದೇವಿಯವರ ಶಕ್ತಿ ಅಡಗಿದೆ. ಹೆಚ್ಚಿನ ಶೋಧನೆ ಅಗತ್ಯವಾಗಿದೆ.

ಅಕ್ಕಮಹಾದೇವಿ ಗವಿಯ ದರ್ಶನ

ಕದಳಿವನಕ್ಕೆ ಹೋಗಲು ಎರಡು ದಾರಿಗಳಿವೆ.

**1) ಶ್ರೀಶೈಲದಿಂದ ಬೋಟಲ್ಲಿ ಅಕ್ಕಮಹಾದೇವಿ ಗವಿಗೆ ಹೋಗಿ, ಅಲ್ಲಿಂದ ತೆಪ್ಪದಲ್ಲಿ ನದಿ ದಾಟಿ, ಕಡಿದಾದ ಗುಡ್ಡವನ್ನು ಏರಿ, ಇಳಿದು ಕದಳಿವನವನ್ನು ತಲುಪಿ. ಮರಳಿ ಅದೇ ದಾರಿಯಲ್ಲಿ ಬಂದು ತೆಪ್ಪದಿಂದ ಅಕ್ಕಮಹಾದೇವಿ ಗವಿಗೆ ಬಂದು, ಅಲ್ಲಿಂದ ಬೋಟಲ್ಲಿ ಶ್ರೀಶೈಲಕ್ಕೆ ಬರುವುದು. ಈ ದಾರಿಯನ್ನು ಒಂದೇ ದಿನದಲ್ಲಿ ಪೂರೈಸಬಹುದು.**

**2) ಶ್ರೀಶೈಲದಿಂದ ನಡೆದುಕೊಂಡು ಕುರಚಲು ಕಾಡನ್ನು ದಾಟಿ ನೀಲಗಂಗಾ ಪ್ರದೇಶ ತಲುಪಿ ಅಲ್ಲಿಂದ ಮೀನುಗಾರರು ತೆಪ್ಪದಲ್ಲಿ ನದಿ ದಾಟಿ ಕಡಿದಾದ ಕುರಚಲು ಗುಡ್ಡವನ್ನು ಏರಿ, ಇಳಿದು ಹಾದಿ ವೀರಭದ್ರನ ಮಾರ್ಗವಾಗಿ ನಡೆಯುತ್ತಾ ಕುರುಚಲು ಕಾಡ ದಾರಿಯನ್ನು ಮಾಡಿಕೊಳ್ಳುತ್ತಾ ಇತ್ತೀಚಿಗೆ ದತ್ತ ಪಾದುಕೆ ಎಂದು ಕರೆಯುವ ಪ್ರದೇಶವನ್ನು ತಲುಪಿ, ಅಲ್ಲಿಂದ ದಟ್ಟವಾದ ಕಾಡಿನಲ್ಲಿ ದಾರಿ ಮಾಡಿಕೊಳ್ಳುತ್ತಾ ನಡೆದು ಕದಳಿವನದ ಗುಹೆಯನ್ನು ತಲುವುವುದು. ಅಲ್ಲಿ ರಾತ್ರಿ ಕಳೆದು ಮರುದಿನ ನಡೆದುಕೊಂಡು ಕುರುಚಲು ಕಾಡಿನಲ್ಲಿ ದಾರಿ ಮಾಡಿಕೊಳ್ಳುತ್ತಾ, ಕಡಿದಾದ ಗುಡ್ಡವನ್ನು ಏರಿ, ಇಳಿಜಾರಿನ ಗುಡ್ಡವನ್ನು ಇಳಿದು ಕದಳಿ ಪರಿಕ್ರಮ ಎನ್ನುವ ಸ್ಥಲವನ್ನು ತಲುಪಿ, ಅಲ್ಲಿಂದ ಮೀನುಗಾರರಿಂದ ತೆಪ್ಪದಲ್ಲಿ ಅಕ್ಕಮಹಾದೇವಿ ಗವಿ ತಲುಪಿ, ಅಲ್ಲಿಂದ ನಡೆಯುತ್ತ ಕಡಿದಾದ ಚಿಕ್ಕ ಗುಡ್ಡವನ್ನು ಏರಿ, ಕುರುಚಲು ಕಾಡಿನಲ್ಲಿ ದಾರಿಯನ್ನು ಮಾಡಿಕೊಳ್ಳುತ್ತಾ, ಶ್ರೀಶೈಲದಿಂದ 60 ಕೀ.ಮಿ ದೂರದ ಮೇನ್ ರೋಡಗೆ ಬಂದು ಸೇರುತ್ತೇವೆ. ಅಲ್ಲಿಂದ ವಾಹನದಲ್ಲಿ ಶ್ರೀಶೈಲ ತಲುಪುವುದು.**




**ಸಾಮಾನ್ಯವಾಗಿ ಸ್ವಲ್ಪ ಸರಳವಾದ 1) ನೇ ದಾರಿಯಲ್ಲಿಯೇ ಎಲ್ಲರೂ ಸಾಗುತ್ತಾರೆ. 2) ನೇ ದಾರಿಯು ಬಹಳ ಕಠಿಣವಾದ ದಾರಿಯಾದ್ದರಿಂದ, ಬಹಳ ಕಡಿಮೆ ಜನರು 2 ನೇ ದಾರಿಯನ್ನು ಆರಿಸಿಕೊಳ್ಳುತ್ತಾರೆ.ಕದಳಿವನ ಮತ್ತು ಅಕ್ಕಮಹಾದೇವಿಯ ಗವಿ ತೆಲಂಗಾಣ, ಆಂಧ್ರಪ್ರದೇಶ ರಾಜ್ಯಗಳ ಗುಡ್ಡಗಳ ಸಾಲಿನಲ್ಲಿ ಬರುತ್ತವೆ.ಕದಳಿವನ ಎನ್ನುವುದು ಮೊದಲು ಬಳಕೆಯಾಗಿದ್ದು 12 ನೇ ಶತಮಾನದ ಅನುಭವ. ಮಂಟಪದ ಅಧಿಪತಿಯಾದ ಅಲ್ಲಮಪ್ರಭು ಪ್ರಸ್ತಾಪಿಸುತ್ತಾರೆ.ಅಕ್ಕಮಹಾದೇವಿಯವರು ಕಲ್ಯಾಣಕ್ಕೆ ಬಂದಾಗ ಅವರಿಗೆ ಕದಳಿವನಕ್ಕೆ ಹೋಗಿ ನಿರ್ವಯಲುವಾಗೆಂದು ಮಾರ್ಗದರ್ಶನ**

ಮಾಡುತ್ತಾರೆ.ಅಕ್ಕಮಹಾದೇವಿಯವರು ಕೊನೆಗೆ ಇಲ್ಲಿಗೆ ಬಂದು ತಪಗೈದು ಬಯಲೊಳಗೆ ಬಯಲಗುತ್ತಾರೆ. ಅಂದಿನಿಂದ ಈ ಪ್ರದೇಶ ವೀರಶೈವಲಿಂಗಾಯತರಿಗೆ ಪವಿತ್ರ ಸ್ಥಳವಾಗಿದೆ.ಚಾರಣಿಗರಿಗೆ ಕಠಿಣವಾದ ಸವಾಲಾಗಿದೆ. ಆ ಸ್ಥಳವನ್ನು ನೋಡಬೇಕೆಂಬ ಹಂಬಲ ಎಲ್ಲರಿಗೂ ಇರುತ್ತದೆ. ಕೆಲವರಿಗೆ ಮಾತ್ರ ಸಾಧ್ಯವಾಗುತ್ತದೆ.

